ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು-12

**ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರ ನಡವಳಿಗಳು**

ವಿಷಯ:- ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ತಾತ್ಕಾಲಿಕವಾಗಿ ಕಾರ್ಯ್ನ ನಿರ್ವಹಿಸುತ್ತಿರುವ ಜೆ.ಓ.ಸಿ ಉಪನ್ಯಾಸಕರುಗಳನ್ನು ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿನ ಖಾಲಿ ಹುದ್ದೆಗಳಲ್ಲಿ ಸೇವಾ ವಿಲೀನಗೊಳಿಸುವ ಬಗ್ಗೆ.

ಉಲ್ಲೇಖ:-
1. ಸರ್ಕಾರದ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವಾಲಯ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 22 ಶಾಸನ 2011 ದಿನಾಂಕ:06-04-2011.
2. ಸರ್ಕಾರದ ಆದೇಶದ ಸಂಖ್ಯೆ: ಇಡಿ 135 ಟಿವಿಇ 2014 ದಿ.06-12-2014.
3. ಸರ್ಕಾರದ ತಿದ್ದುಪಡಿ ಆದೇಶದ ಸಂಖ್ಯೆ: ಇಡಿ 135 ಟಿವಿಇ 2014 ದಿ.30-12-2014.
4. ನಿರ್ದೇಶಕರು, ವೃತ್ತಿ ಶಿಕ್ಷಣ ಇಲಾಖೆ, ಇವರ ಪತ್ರ ಸಂಖ್ಯೆ: ವೃಶಿನಿ:ಸಿಬ್ಬಂದಿ:545 ದಿನಾಂಕ 20-05-2014.
5. ಈ ಕಛೇರಿ ಪತ್ರ ಸಂಖ್ಯೆ:ಪಪೂಶಿ/ಸಿಬ್ಬಂದಿ-3/ಖಾಹುಮಾ/ 2012-13 ದಿನಾಂಕ 06-08-2014
6. ವೃತ್ತಿ ಶಿಕ್ಷಣ ನಿರ್ದೇಶನಾಲಯದ ಪತ್ರ ಸಂಖ್ಯೆ: ವೃಶಿನಿ: ವಿಲೀನ:ಸಮಿತಿ:83.2014 ದಿ.17-12-2014.

*~*~*

**ಪ್ರಸ್ತಾವನೆ:**

ಉಲ್ಲೇಖ-1ರ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವಾಲಯದ ಅಧಿಸೂಚನೆ ದಿನಾಂಕ 06-04-2011 ರಲ್ಲಿ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳಲ್ಲಿ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರನ್ನು ವಿಲೀನಗೊಳಿಸುವ ಸಂಬಂಧವಾಗಿ ನಿಯಮಗಳನ್ನು ರೂಪಿಸಿದೆ. ಸದರಿ ನಿಯಮಗಳ ನಿಯಮ 3(2)ರಲ್ಲಿ "ಖಾಸಗಿ ಅನುದಾನಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರ ಸಂದರ್ಭದಲ್ಲಿ, ಸರ್ಕಾರವು, ಯಾವುದೇ ಖಾಸಗಿ ಅನುದಾನಿತ ಸಂಸ್ಥೆಗಳಲ್ಲಿ ಲಭ್ಯವಿರುವ ಸೂಕ್ತ ಖಾಲಿ ಸ್ಥಾನಗಳಿಗೆ ಪ್ರತಿಯಾಗಿ ಅಥವಾ ಇನ್ನು ಮುಂದೆ ಉಂಟಾಗುವ ಖಾಲಿ ಸ್ಥಾನಗಳಿಗೆ ಪ್ರತಿಯಾಗಿ ಅರ್ಹ ವ್ಯಕ್ತಿಗಳನ್ನು ವಿಲೀನಗೊಳಿಸಿಕೊಳ್ಳಲು ಅನುದಾನಿತ ಸಂಸ್ಥೆಗಳಿಗೆ" ನಿರ್ದೇಶನ ನೀಡಲು ನಿಯಮಗಳನ್ನು ರೂಪಿಸಿದೆ.

..2

ಉಲ್ಲೇಖ-1ರ ಸರ್ಕಾರದ ಅಧಿಸೂಚನೆ ದಿನಾಂಕ 06-04-2011ರ ಆದೇಶದನ್ವಯ ಪದವಿ ಪೂರ್ವ ಶಿಕ್ಷಣ ಇಲಾಖೆ ಈ ಕಛೇರಿ ನಡವಳಿಗಳು ದಿನಾಂಕ 29-05-2014 ರಲ್ಲಿ 79 ಜನ ವೃತ್ತಿಪರ ಉಪನ್ಯಾಸಕರುಗಳ ಸೇವೆಯನ್ನು ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರುಗಳು ಕೌನ್ಸಿಲಿಂಗ್‌ನಲ್ಲಿ ಆಯ್ಕೆ ಮಾಡಿಕೊಂಡ ಸ್ಥಳಗಳಿಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಲಾಗಿದೆ.

ಉಲ್ಲೇಖ-4ರ ಪತ್ರ ದಿನಾಂಕ 20-05-2014ರಲ್ಲಿ ನಿರ್ದೇಶಕರು, ವೃತ್ತಿ ಶಿಕ್ಷಣ ಇಲಾಖೆ, ಇವರು ಸೇವಾ ವಿಲೀನಕ್ಕೆ ಬಾಕಿ ಇರುವ ಉಪನ್ಯಾಸಕರುಗಳನ್ನು ಸ್ಥಳ ನಿಯುಕ್ತಿಗೊಳಿಸುವ ಸಂಬಂಧ ಖಾಲಿ ಹುದ್ದೆಗಳನ್ನು ಒದಗಿಸಲು ಕೋರಿ ಮನವಿ ಸಲ್ಲಿಸಿದ್ದರು: ಈ ಹಿನ್ನೆಲೆಯಲ್ಲಿ ದಿನಾಂಕ 02-04-2013 ರಿಂದ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕ ಹುದ್ದೆಗಳ ಮಾಹಿತಿಗಳನ್ನು ಜಿಲ್ಲಾ ಉಪ ನಿರ್ದೇಶಕರುಗಳಿಂದ ಸಂಗ್ರಹಿಸಿ ವೃತ್ತಿ ಶಿಕ್ಷಣ ಇಲಾಖೆಗೆ ಈ ಕಛೇರಿ ಪತ್ರ ದಿನಾಂಕ 06-08-2014 ರಲ್ಲಿ ವೃತ್ತಿ ಶಿಕ್ಷಣ ಇಲಾಖೆಗೆ ಒದಗಿಸಲಾಗಿತ್ತು. ಹಾಗೂ ಖಾಲಿ ಇರುವ ಹುದ್ದೆಗಳಿಗೆ ಅರ್ಹ ವೃತ್ತಿಪರ ಉಪನ್ಯಾಸಕರುಗಳ ವಿದ್ಯಾರ್ಹತೆ ವಯೋಮಿತಿ ಇತ್ಯಾದಿಗಳನ್ನು ಪರಿಶೀಲಿಸಿ ತಮ್ಮ ಹಂತದಲ್ಲಿ ಸ್ಥಳ ಆಯ್ಕೆ ಕೌನ್ಸಿಲಿಂಗ್ ಪ್ರಕ್ರಿಯೆ ನಡೆಸಿ ಸರ್ಕಾರದ ಅನುಮತಿ ಪಡೆದು ಈ ಕಛೇರಿಗೆ ಒದಗಿಸಿದಲ್ಲಿ ಸ್ಥಳ ನಿಯುಕ್ತಿ ಆದೇಶವನ್ನು ಹೊರಡಿಸಲಾಗುವುದೆಂದು ಸೂಚಿಸಲಾಗಿತ್ತು.

ಉಲ್ಲೇಖ-2 ಮತ್ತು 3ರ ಸರ್ಕಾರದ ಆದೇಶದ ದಿನಾಂಕ 06-12-2014 ಮತ್ತು ತಿದ್ದುಪಡಿ ದಿನಾಂಕ 30-12-2014 ರಲ್ಲಿ ವೃತ್ತಿ ಆಧಾರಿತ ಕೋರ್ಸುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 52 ಜನ ಉಪನ್ಯಾಸಕರುಗಳ ಸೇವೆಯನ್ನು ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಪೂರ್ಣಕಾಲಿಕ ಅನುದಾನಿತ ಹುದ್ದೆಗಳಿಗೆ ಷರತ್ತುಗಳನ್ನು ಒಳಪಡಿಸಿ ಸರ್ಕಾರ ಆದೇಶ ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ ಸೇವೆಯಲ್ಲಿ ವಿಲೀನಗೊಳಿಸಿ ಆದೇಶಿಸಿದೆ.

ವೃತ್ತಿ ಶಿಕ್ಷಣ ಇಲಾಖೆಯು 52 ಜನ ವೃತ್ತಿಪರ ಉಪನ್ಯಾಸಕರುಗಳಿಗೆ ದಿನಾಂಕ 19-08-2014 ರಂದು ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕ ಹುದ್ದೆಗಳಿಗೆ ಸ್ಥಳ ಆಯ್ಕೆ ಪ್ರಕ್ರಿಯೆಯನ್ನು ಕೌನ್ಸಿಲಿಂಗ್ ಮೂಲಕ ನಡೆಸಿ ಪಟ್ಟಿಯನ್ನು ಸರ್ಕಾರದಿಂದ ದಿನಾಂಕ 06-12-2014 ರಂದು ಅನುಮೋದಿಸಿಕೊಂಡಿರುತ್ತಾರೆ. ವೃತ್ತಿ ಶಿಕ್ಷಣ ಇಲಾಖೆ ಸರ್ಕಾರದ ಆದೇಶದ ಷರತ್ತಿನ ಸಂಖ್ಯೆ 11 ಮತ್ತು 12ಕ್ಕೆ ಸಂಬಂಧಪಟ್ಟಂತೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ವಿದ್ಯಾರ್ಹತೆ ಇರುವುದನ್ನು ದೃಢೀಕರಿಸಿದೆ. ಹಾಗೂ 2011ರ ಅಧಿನಿಯಮಗಳಿಗೆ ಅರ್ಹರಿರುತ್ತಾರೆಂದು ವೃತ್ತಿ ಶಿಕ್ಷಣ ಇಲಾಖೆ ದೃಢೀಕರಿಸಿದೆ.

ಸರ್ಕಾರದ ಆದೇಶದ ದಿನಾಂಕ 06-12-2014 ಮತ್ತು ತಿದ್ದುಪಡಿ ದಿನಾಂಕ 30-12-2014 ರಲ್ಲಿ ವೃತ್ತಿ ಆಧಾರಿತ ಕೋರ್ಸುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 52 ಜನ ಉಪನ್ಯಾಸಕರುಗಳ ಸೇವೆಯನ್ನು ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ವಿಲೀನಗೊಳಿಸುವ ಕುರಿತು ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಪೂಶಿ/ಸಿಬ್ಬಂದಿ-3/ಖಾಹುಮಾ/3/2012-13 ದಿನಾಂಕ31 -01-2015.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ, ಖಾಲಿ ಇರುವ ಉಪನ್ಯಾಸಕ ಹುದ್ದೆಗಳಿಗೆ ವೃತ್ತಿ ಆಧಾರಿತ ಕೋರ್ಸುಗಳಲ್ಲಿ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುತ್ತಿರುವ, **52 ಜನ ಅರೆಕಾಲಿಕ ಉಪನ್ಯಾಸಕರುಗಳ ಸೇವೆಯನ್ನು ಸರ್ಕಾರದ ನಡವಳಿಗಳು ದಿನಾಂಕ 06-12-2014 ರಲ್ಲಿ ಷರತ್ತಿಗೊಳಪಡಿಸಿ ಸೇವೆಯಲ್ಲಿ ವಿಲೀನಗೊಳಿಸಿ ಆದೇಶಿಸಿದ್ದು,** ಅದರಂತೆ ಈ ಕೆಳಕಂಡ ಉಪನ್ಯಾಸಕರು ದಿನಾಂಕ 19-08-2014ರ ಕೌನ್ಸಿಲಿಂಗ್‌ನಲ್ಲಿ ಆಯ್ಕೆ ಮಾಡಿಕೊಂಡ ಸ್ಥಳಕ್ಕೆ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಉಪನ್ಯಾಸಕರ ವೇತನ ಶ್ರೇಣಿಯ ಕನಿಷ್ಠ ಹಂತದಲ್ಲಿ **₹22,800-43,200** ರಲ್ಲಿ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

| ಕ್ರ.ಸಂ. | ಉಪನ್ಯಾಸಕರ ಹೆಸರು ಮತ್ತು ವಿಳಾಸ ಶ್ರೀ/ಶ್ರೀಮತಿ | ಪದನಾಮ | ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿರುವ ಸ್ಥಳ |
|---|---|---|---|
| 1 | ದತ್ತಾತ್ರೇಯ<br>ಸ್ವತಂತ್ರ ಪದವಿ ಪೂರ್ವ ಕಾಲೇಜು, ನಿಡಗುಂದಿ, ಬಸವನ ಬಾಗೇವಾಡಿ (ತಾ.)ಬಿಜಾಪುರ (ಜಿಲ್ಲೆ)ಮೊಬೈಲ್ ಸಂ. 9901378889 | ಕನ್ನಡ ಉಪನ್ಯಾಸಕರು | ಶ್ರೀ ವೀರೇಶ್ವರ ಪದವಿ ಪೂರ್ವ ಕಾಲೇಜು, ನಲತ್‌ವಾಡ ಮುದ್ದೇಬಿಹಾಳ, ಬಿಜಾಪುರ ಜಿಲ್ಲೆ -586124. |
| 2 | ಚಂದ್ರಶೇಖರ್ ಡಿ<br>ಶ್ರೀ ಸ್ವಾಮಿ ವಿವೇಕಾನಂದ ಪದವಿ ಪೂರ್ವ ಕಾಲೇಜು, ತುರುವೇಕೆರೆ, ತುಮಕೂರು(ಜಿಲ್ಲೆ),ಮೊಬೈಲ್ ಸಂ. 9448971640 | ಕನ್ನಡ ಉಪನ್ಯಾಸಕರು | ಚಂದ್ರಶೇಖರ ವಿದ್ಯಾವಾಹಿನಿ ಪದವಿ ಪೂರ್ವ ಕಾಲೇಜು, ಎಸ್.ಐ.ಟಿ. ಎಕ್ಸ್‌ಟೆನ್ಷನ್, ತುಮಕೂರು-572103. |
| 3 | ಸಾವಿತ್ರಿ ಅಣ್ಣೀಗೇರಿ<br>ಬಿ.ಇ.ಎಸ್. ಪದವಿ ಪೂರ್ವ ಕಾಲೇಜು, ಬ್ಯಾಡಗಿ, ಹಾವೇರಿ (ಜಿಲ್ಲೆ),ಮೊಬೈಲ್ ಸಂ. 9663370816 | ಕನ್ನಡ ಉಪನ್ಯಾಸಕರು | ಶ್ರೀಮತಿ ಜಿ.ಕೆ.ಎಸ್. ವುಮೆನ್ಸ್ ಪದವಿ ಪೂರ್ವ ಕಾಲೇಜು, ಜೆ.ಸಿ. ಎಕ್ಸ್‌ಟೆನ್ಷನ್, ಹರಿಹರ, ದಾವಣಗೆರೆ ಜಿಲ್ಲೆ-577601. |
| 4 | ವೇದಮೂರ್ತಿ ಆರ್ ಎಂ<br>ಎಸ್.ವಿ.ಎಸ್. ಗಂಗೋತ್ರಿ ಪದವಿ ಪೂರ್ವ ಕಾಲೇಜು, ಕಲ್ಲೂರು, ಗುಬ್ಬಿ ತಾ. ತುಮಕೂರು ಜಿಲ್ಲೆ. ಮೊಬೈಲ್ ಸಂ. 9663370816 | ಕನ್ನಡ ಉಪನ್ಯಾಸಕರು | ವಿವೇಕಾನಂದ ಪದವಿ ಪೂರ್ವ ಕಾಲೇಜು, ಮಲ್ಲೇಶ್ವರಂ, ಡಾ.ರಾಜಕುಮಾರ್ ರಸ್ತೆ, ಬೆಂಗಳೂರು-560055. |
| 5 | ಡಾ. ಸೋಮಶಂಕ್ರಯ್ಯ ವಿಶ್ವನಾಥಮಠ<br>ಶರಣಬಸವೇಶ್ವರ ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯ, ಗುಲ್ಬರ್ಗ. ಮೊಬೈಲ್ ಸಂ. 9343253682 | ಕನ್ನಡ ಉಪನ್ಯಾಸಕರು | ಮೆಥಾಡಿಸ್ಟ್ ಕಾಂಪೊಸಿಟ್ ಪದವಿ ಪೂರ್ವ ಕಾಲೇಜು, ರಾಯಚೂರು-584101. |

| | | | |
|---|---|---|---|
| 6 | ಸುವರ್ಣ, ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಪದವಿ ಪೂರ್ವ ಕಾಲೇಜು, ರಂಗಂಪೇಟ, ಸುರಪುರ (ತಾ.) ಯಾದಗಿರಿ (ಜಿಲ್ಲೆ), ಮೊಬೈಲ್ ಸಂ. 9591020891 | ಕನ್ನಡ ಉಪನ್ಯಾಸಕರು | ಶ್ರೀ ಎಂ ಬಿ ಪಾಟೀಲ್ ಪದವಿ ಪೂರ್ವ ಕಾಲೇಜು, ಕಲಕೇರಿ, ಮುಂಡರಗಿ ತಾ. ಗದಗ್ ಜಿಲ್ಲೆ-582118. |
| 7 | ಡಾ. ಚಂದ್ರಕಾಂತ ನ್ಯೂ ಕನ್ನಡ ಸಂಯುಕ್ತ ಪದವಿ ಪೂರ್ವ ಕಾಲೇಜು, ಯಾದಗೀರ, ಮೊಬೈಲ್ ಸಂ. 92424655546 | ಕನ್ನಡ ಉಪನ್ಯಾಸಕರು | ಆರ್.ಎಲ್.ಎಸ್. ಕಾಂಪೊಸಿಟ್ ಪದವಿ ಪೂರ್ವ ಕಾಲೇಜು, ಧಾರವಾಡ-580008 |
| 8 | ವೀರಪ್ಪ ಬಸಪ್ಪ ಬೂದನೂರ್ ಜೆ.ಎಸ್.ಎಸ್. ಆರ್.ಎಸ್. ಹುಕ್ಕೇರಿಕರ ಪದವಿ ಪೂರ್ವ ಕಾಲೇಜು, ವಿದ್ಯಾಗಿರಿ, ಧಾರವಾಡ-04. ಮೊಬೈಲ್ ಸಂ. 9964571774 | ಕನ್ನಡ ಉಪನ್ಯಾಸಕರು | ಬಿ.ಇ. ಕಾಂಪೊಸಿಟ್ ಪದವಿ ಪೂರ್ವ ಕಾಲೇಜು, ಕಲಘಟಗಿ, ಧಾರವಾಡ-581204. |
| 9 | ಶ್ರೀಮತಿ ಎಸ್.ವಿ.ಇ.ಟಿ. ಪದವಿ ಪೂರ್ವ ಕಾಲೇಜು, ಹುಮನಾಬಾದ್ ತಾ.ಬೀದರ್ ಜಿಲ್ಲೆ ಮೊಬೈಲ್ ಸಂ. 9379896166 | ಕನ್ನಡ ಉಪನ್ಯಾಸಕರು | ಶ್ರೀ ಜಗದಾಂಬ ಪದವಿ ಪೂರ್ವ ಕಾಲೇಜು, ಹಿಟ್ಟಿನಹಳ್ಳಿ ತಾಂಡಾ, ಸಿಂಧಗಿ, ಬಿಜಾಪುರ ಜಿಲ್ಲೆ-586151 |
| 10 | ಉಷಾದೇವಿ ಪಿ ಕಸ್ತೂರಬಾ ಬಾಲಿಕಾ ಪದವಿ ಪೂರ್ವ ಕಾಲೇಜು, ಶಿವಮೊಗ್ಗ, ಮೊಬೈಲ್ ಸಂ. 9980591470 | ಕನ್ನಡ ಉಪನ್ಯಾಸಕರು | ನ್ಯಾಷನಲ್ ಪದವಿ ಪೂರ್ವ ಕಾಲೇಜು, ಬಾಲರಾಜ ಅರಸ್ ರಸ್ತೆ, ಶಿವಮೊಗ್ಗ, 577201. |
| 11 | ಮಠ್ ಸಂಗಯ್ಯ ಎಸ್.ಎಸ್. ಪದವಿ ಪೂರ್ವ ಕಾಲೇಜು, ಲೋಣಿ (ಬಿ.ಕೆ) 586204, ಇಂಡಿ ತಾ. ಬಿಜಾಪುರ ಜಿಲ್ಲೆ, ಮೊಬೈಲ್ ಸಂ. 9900759370 | ಕನ್ನಡ ಉಪನ್ಯಾಸಕರು | ಎಂ.ವಿ.ಪಠಾಣ್ ಕಾಂಪೊಸಿಟ್ ಪದವಿ ಪೂರ್ವ ಕಾಲೇಜು, ರಬಕವಿ ಜಮಖಂಡಿ ತಾ. ಬಾಗಲಕೋಟೆ ಜಿಲ್ಲೆ-587314. |
| 12 | ರಾಘಮ್ಮ ಕೆ.ಎಸ್.ಎಸ್.ಬಿ. ಜವಾಹರ್‌ನಗರ ಪದವಿ ಪೂರ್ವ ಕಾಲೇಜು, ರಾಯಚೂರು,ಮೊಬೈಲ್ ಸಂ. 7795105211 | ಕನ್ನಡ ಉಪನ್ಯಾಸಕರು | ಹೆಚ್ ಸಿ ಇ ಎಸ್ ಇಂಡಿಪೆಂಡೆಂಟ್ ಪದವಿ ಪೂರ್ವ ಕಾಲೇಜು, ಗದಗ್-562101. |
| 13 | ಪ್ರಭಾವತಿ ಬಾಲಕೃಷ್ಣ, ಬಾಪೂಜಿ ಗ್ರಾಮೀಣ ವಿಕಾಸ ಸಮಿತಿ ಪದವಿ ಪೂರ್ವ ಕಾಲೇಜು, ಸದಾಶಿವಗಢ, ಉತ್ತರಕನ್ನಡ ಜಿಲ್ಲೆ,ಮೊಬೈಲ್ ಸಂ. 9482212064 | ಕನ್ನಡ ಉಪನ್ಯಾಸಕರು | ಪ್ರೊಗ್ರೆಸಿವ್ ಪದವಿ ಪೂರ್ವ ಕಾಲೇಜು, ನಿಲೆಕೇಣಿ, ಶಿರಸಿ ತಾ. ಉತ್ತರ ಕನ್ನಡ-581403. |
| 14 | ರಮಾಕಾಂತ್ ಅಕ್ಕಮಹಾದೇವಿ ಮಹಿಳಾ ಮಹಾವಿದ್ಯಾಲಯ,ಬೀದರ್,ಮೊಬೈಲ್ ಸಂ. 9972696364 | ಕನ್ನಡ ಉಪನ್ಯಾಸಕರು | ನ್ಯೂ ಇಂಗ್ಲೀಷ್ ಕಾಂಪೊಸಿಟ್ ಪದವಿ ಪೂರ್ವ ಕಾಲೇಜು, ಅಳ್ನಾವರ, ಧಾರವಾಡ-5871103. |
| 15 | ಪಂಚಲಿಂಗೇಗೌಡ, ಹೆಚ್. ಎಸ್. ಹೆಚ್.ಕೆ. ವೀರಣ್ಣಗೌಡ ಪದವಿ ಪೂರ್ವ ಕಾಲೇಜು, ಮದ್ದೂರು ತಾ. ಮಂಡ್ಯ ಜಿಲ್ಲೆ ,ಮೊಬೈಲ್ ಸಂ. 9844385209 | ಕನ್ನಡ ಉಪನ್ಯಾಸಕರು | ಹೆಚ್ ಕೆ ವೀರಣ್ಣಗೌಡ ಪದವಿ ಪೂರ್ವ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ-571428. |
| 16 | ರಾಜಣ್ಣ ಎನ್ ಟಿ, ಸರ್ವೋದಯ ಸಂಯುಕ್ತ ಪದವಿ ಪೂರ್ವ ಕಾಲೇಜು, ಕೊಪ್ಪ, ಮದ್ದೂರು ತಾ. ಮಂಡ್ಯ ಜಿಲ್ಲೆ. ಮೊಬೈಲ್ ಸಂ. 8710090916 | ಕನ್ನಡ ಉಪನ್ಯಾಸಕರು | ಎಸ್. ಜಿ. ಸ್ವಾಮಿ ಕಾಂಪೊಸಿಟ್ ಪದವಿ ಪೂರ್ವ ಕಾಲೇಜು, ಆದಿಚುಂಚನಗಿರಿ, ನಾಗಮಂಗಲ ತಾ.-571811 |

| | | | |
|---|---|---|---|
| 17 | ವಿರೂಪಾಕ್ಷಪ್ಪ ಜಿ<br>ಕೊಟ್ಟೂರೇಶ್ವರ ಪದವಿ ಪೂರ್ವ ಕಾಲೇಜು, ಕೊಟ್ಟೂರು, ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ. ಮೊಬೈಲ್ ಸಂ. 9448006387 | ಕನ್ನಡ ಉಪನ್ಯಾಸಕರು | ಬಿ.ಬಿ.ಎಸ್. ಅಂಬೇಡ್ಕರ್ ಪದವಿ ಪೂರ್ವ ಕಾಲೇಜು, ಜೆ.ಸಿ. ಎಕ್ಸ್‌ಟೆನ್ಷನ್, ದಾವಣಗೆರೆ ಜಿಲ್ಲೆ-577601. |
| 18 | ಮಹಾದೇವಯ್ಯ ಎಸ್ ಎಂ<br>ತುಂಗಭದ್ರ ಪದವಿ ಪೂರ್ವ ಕಾಲೇಜು,ಕೊಟ್ಟೂರು,ಬಳ್ಳಾರಿ ಜಿಲ್ಲೆ.ಮೊಬೈಲ್ ಸಂ. 9731349694 | ಕನ್ನಡ ಉಪನ್ಯಾಸಕರು | ಕೆ.ವಿ.ಎಸ್.ಆರ್. ಕಾಂಪೊಸಿಟ್ ಪದವಿ ಪೂರ್ವ ಕಾಲೇಜು, ತಿಮ್ಮಾಪುರ, ಗದಗ್ ತಾ. 582115. |
| 19 | ಶ್ರೀನಿವಾಸಯ್ಯ ಹೆಚ್ ಜಿ,<br>ಸಾರ್ವಜನಿಕ ಪದವಿ ಪೂರ್ವ ಕಾಲೇಜು, ಚನ್ನಪಟ್ಟಣ, ರಾಮನಗರ ಜಿಲ್ಲೆ, ಮೊಬೈಲ್ ಸಂ. 9964122097 | ಕನ್ನಡ ಉಪನ್ಯಾಸಕರು | ಎ.ಜಿ.ಜಿ.ಸಿ. ಪದವಿ ಪೂರ್ವ ಕಾಲೇಜು, ಫಾರ್ ವುಮೆನ್, ಕೆ. ಕಾಮರಾಜ ರಸ್ತೆ, ಸಂ. 45, ಬೆಂಗಳೂರು-560042. |
| 20 | ಸುರೇಶ ಡಿ<br>ಗಾಂಧಿ ಪದವಿ ಪೂರ್ವ ಕಾಲೇಜು, ಬೆಕ್ಕಳಲೆ, ಮದ್ದೂರು ತಾ. ಮಂಡ್ಯ ಜಿಲ್ಲೆ. ಮೊಬೈಲ್ ಸಂ. 9480765531 | ಕನ್ನಡ ಉಪನ್ಯಾಸಕರು | ಮಾತೃಮಂಡಳಿ ಬಾಲಕಿಯರ ಪದವಿ ಪೂರ್ವ ಕಾಲೇಜು, ವಿವಿ ಮೊಹಲ್ಲ, ಮೈಸೂರು-570002. |
| 21 | ಬಸವರಾಜು ಸಿ,<br>ಕಲ್ಪತರು ಪದವಿ ಪೂರ್ವ ಕಾಲೇಜು, ತಿಪಟೂರು,<br>ತುಮಕೂರು ಜಿಲ್ಲೆ, ಮೊಬೈಲ್ ಸಂ.9448769549 | ಕನ್ನಡ ಉಪನ್ಯಾಸಕರು | ವಿದ್ಯೋದಯ ಬಾಲಕಿಯರ ಪದವಿ ಪೂರ್ವ ಕಾಲೇಜು, ಟಿ.ನರಸಿಪೂರ, ಮೈಸೂರು ಜಿಲ್ಲೆ. 571124 |
| 22 | ವೀರಪ್ಪ ಕೋರಿ,<br>ಜಿ.ವಿ.ಹೆಚ್. ಪದವಿ ಪೂರ್ವ ಕಾಲೇಜು, ಹೊಸರಿತ್ತಿ, ಹಾವೇರಿ ಜಿಲ್ಲೆ,ಮೊಬೈಲ್ ಸಂ. 9611728095 | ಕನ್ನಡ ಉಪನ್ಯಾಸಕರು | ಬಿ.ವಿ.ವಿ.ಎಸ್ ಸಿ.ಎಸ್.ಎಸ್ ಪದವಿ ಪೂರ್ವ ಕಾಲೇಜು, ಚಿಕ್ಕೋಡಿ, ಬೆಳಗಾಂ ಜಿಲ್ಲೆ 591201 |
| 23 | ಬಸವಣ್ಣೆಪ್ಪ ಪಿ ತೋಟದ್,<br>ಗುದ್ಲೆಪ್ಪ ಹಳ್ಳಿಕೇರಿ ಪದವಿ ಪೂರ್ವ ಕಾಲೇಜು, ಹಾವೇರಿ ,ಮೊಬೈಲ್ ಸಂ. 9586475908 | ಕನ್ನಡ ಉಪನ್ಯಾಸಕರು | ಎಸ್ ಎಲ್. ಬಿ ಎಸ್ ಕಾಂಪೊಸಿಟ್ ಪದವಿ ಪೂರ್ವ ಕಾಲೇಜು, ಯಾದಗೂಡ, ಹುಕ್ಕೇರಿ, ಬೆಳಗಾಂ, 591309 |
| 24 | ಸುನೀತ ಎಂ ಎನ್,<br>ಕಾವೇರಿ ಪದವಿ ಪೂರ್ವ ಕಾಲೇಜು, ಗೋಣಿಕೊಪ್ಪಲು, ದಕ್ಷಿಣ ಕೊಡಗು, ಮೊಬೈಲ್ ಸಂ. 8762585478 | ಕನ್ನಡ ಉಪನ್ಯಾಸಕರು | ಶ್ರೀ ಮಂಗಲ ಪದವಿ ಪೂರ್ವ ಕಾಲೇಜು, ವಿರಾಜಪೇಟೆ ಕೋಡಗು ಜಿಲ್ಲೆ 571217 |
| 25 | ಸೆಟ್ರ ಚನ್ನಬಸಪ್ಪ,<br>ಎಸ್.ಯು.ಜೆ.ಎಂ. ಪದವಿ ಪೂರ್ವ ಕಾಲೇಜು, ಹರಪನಹಳ್ಳಿ ,ದಾವಣಗೆರೆ ಜಿಲ್ಲೆ,ಮೊಬೈಲ್ ಸಂ. 9741940730 | ಕನ್ನಡ ಉಪನ್ಯಾಸಕರು | ಸುಭಾಷಿಣಿ ಮಹಿಳಾ ಪದವಿ ಪೂರ್ವ ಕಾಲೇಜು, ರಾಬರ್ಟ್‌ಸನ್ ಪೇಟೆ, ಬಂಗಾರಪೇಟೆ, ಕೋಲಾರ, 563122. |
| 26 | ಶ್ರೀನಿವಾಸ,<br>ವಿದ್ಯಾವರ್ಧಕ ಪಧವಿ ಪೂರ್ವ ಕಾಲೇಜು , ಶೇಷಾದ್ರಿ ಅಯ್ಯರ್ ರಸ್ತೆ,ಮೈಸೂರು.ಮೊಬೈಲ್ ಸಂ. 9980029305 | ಕನ್ನಡ ಉಪನ್ಯಾಸಕರು | ವಿದ್ಯಾವರ್ಧಕ ಪದವಿ ಪೂರ್ವ ಕಾಲೇಜು , ಶೇಷಾದ್ರಿ ಅಯ್ಯರ್ ರಸ್ತೆ,ಮೈಸೂರು. |
| 27 | ಮಂಜುನಾಥ ಇ,<br>ಶ್ರೀ ವಿನಾಯಕ ಸಂಯುಕ್ತ ಪದವಿ ಪೂರ್ವ ಕಾಲೇಜು, ಮಳಲಿ, ಹೊಸದುರ್ಗ ತಾ.ಚಿತ್ರದುರ್ಗ ಜಿಲ್ಲೆ,ಮೊಬೈಲ್ ಸಂ. 9448398419 | ಕನ್ನಡ ಉಪನ್ಯಾಸಕರು | ನ್ಯಾಷನಲ್ ಪದವಿ ಪೂರ್ವ ಕಾಲೇಜು, ಬಿ.ಅರ್ ಪ್ರಾಜೆಕ್ಟ್, ಶಿವಮೊಗ್ಗ - 577115. |

| | | | |
|---|---|---|---|
| 28 | ಸುನಿತ ಟಿ,<br>ಶೆಟ್ರ ಗುರುಶಾಂತಪ್ಪ ಪದವಿ ಪೂರ್ವ ಕಾಲೇಜು, ವೈ. ನಾಗೇಶ ಶಾಸ್ತ್ರಿನಗರ, ಗಾಂಧಿನಗರ, ಬಳ್ಳಾರಿ.<br>ಮೊಬೈಲ್ ಸಂ. 9972825222 | ಆಂಗ್ಲಭಾಷಾ ಉಪನ್ಯಾಸಕರು | ಎಸ್.ಎ.ಎಸ್ ಎಂ ಪದವಿ ಪೂರ್ವ ಕಾಲೇಜು, (ಮಹಿಳೆಯರು) ಗಾಂಧಿನಗರ, ಬಳ್ಳಾರಿ, 583103 |
| 29 | ದಖನಿ ಸಯೀದ ಸೈಯದ್ ಯೂಸುಫ್<br>ಸಿಕ್ಯಾಬ್ ಮಹಿಳಾ ಪದವಿ ಪೂರ್ವ ಕಾಲೇಜು, ನವರಸಪುರ, ಬಾಗಲಕೋಟೆ ರಸ್ತೆ, ಬಿಜಾಪುರ.ಮೊಬೈಲ್ ಸಂ. 72048840410 | ಆಂಗ್ಲಭಾಷಾ ಉಪನ್ಯಾಸಕರು | ಬಸವೇಶ್ವರ ಪದವಿ ಪೂರ್ವ ಕಾಲೇಜು, ಕಡಪಟ್ಟಿ, ಜಮಖಂಡಿ, ಬಾಗಲಕೋಟೆ 587302 |
| 30 | ಬಿರಾದಾರ್ ಚಂದ್ರಶೇಖರ್ ಗುರುಬಸಪ್ಪ,<br>ಜೆ.ಎ. ಪದವಿ ಪೂರ್ವ ಕಾಲೇಜು, ಅಥಣಿ, ಬೆಳಗಾಂ (ಜಿಲ್ಲೆ) ಮೊಬೈಲ್ ಸಂ. 9986118245 | ಆಂಗ್ಲ ಭಾಷಾ ಉಪನ್ಯಾಸಕರು | ಜ್ಯೋತಿ ಪದವಿ ಪೂರ್ವ ಕಾಲೇಜು, ಕ್ಲಬ್ ರೋಡ್ ಕ್ಯಾಂಪ್, ಬೆಳಾಗಂ 590001 |
| 31 | ವೆಂಕಟರಮಣಪ್ಪ ಹೆಚ್ ಟಿ<br>ಎಸ್.ಕೆ. ಎಂ.ಎಂ. ಗಂಗೋತ್ರಿ ಪದವಿ ಪೂರ್ವ,ಮಹಾವಿದ್ಯಾಲಯ, ಶಿರಾ, ತುಮಕೂರು ಜಿಲ್ಲೆ.ಮೊಬೈಲ್ ಸಂ. 9900953213 | ಆಂಗ್ಲ ಭಾಷಾ ಉಪನ್ಯಾಸಕರು | ಬಿ.ಇ.ಎಲ್ ಕಾಂಪೊಸಿಟ್ ಪದವಿ ಪೂರ್ವ ಕಾಲೇಜು, ಜಾಲಹಳ್ಳಿ, ಬೆಂಗಳೂರು 560013 |
| 32 | ಶೈಲಜಾ ಪಾಟೀಲ್<br>ಆರ್.ಎಂ.ಜಿ. ಪದವಿ ಪೂರ್ವ ಮಹಾವಿದ್ಯಾಲಯ, ಮುಧೋಳ–5873113, ಬಾಗಲಕೋಟೆ (ಜಿಲ್ಲೆ), ಮೊಬೈಲ್ ಸಂ. 9972410160 | ಆಂಗ್ಲಭಾಷಾ ಉಪನ್ಯಾಸಕರು | ಎಸ್ ಪಿ.ಜೆ.ಜಿ ಕಾಂಪೊಸಿಟ್ ಪದವಿ ಪೂರ್ವ ಕಾಲೇಜು, ಮನೋಲ್ಲಿ ಸೌದತ್ತಿ, ಬೆಳಗಂ 591117 |
| 33 | ಶಿವಕುಮಾರ್ ಯು ಎಸ್,<br>ಹೆಚ್ ಕೆ ವೀರಣ್ಣಗೌಡ ಪದವಿ ಪೂರ್ವ ಕಾಲೇಜು, ಮದ್ದೂರು, ಮಂಡ್ಯ(ಜಿಲ್ಲೆ) ಮೊಬೈಲ್ ಸಂ. 9591020891 | ಆಂಗ್ಲಭಾಷಾ ಉಪನ್ಯಾಸಕರು | ಹೆಚ್ ಕೆ ವೀರಣ್ಣಗೌಡ ಪದವಿ ಪೂರ್ವ ಕಾಲೇಜು, ಮದ್ದೂರು, ಮಂಡ್ಯ(ಜಿಲ್ಲೆ)571428 |
| 34 | ಶೋಭ ಎಸ್ ಕೆ,<br>ವಿದ್ಯಾ ವರ್ಧಕ ಪದವಿ ಪೂರ್ವ ಕಾಲೇಜು, ಶೇಷಾದ್ರಿ ಅಯ್ಯರ್ ರಸ್ತೆ, ಮೈಸೂರು.ಮೊಬೈಲ್ ಸಂ. 9986585514 | ಆಂಗ್ಲಭಾಷಾ ಉಪನ್ಯಾಸಕರು | ಎಸ್.ಬಿ.ಆರ್ಆರ್ ಮಹಾಜನ ಪದವಿ ಪೂರ್ವ ಕಾಲೇಜು, ಜಯಲಕ್ಷ್ಮೀಪುರಂ, ಮೈಸೂರು 570012 |
| 35 | ಶಿಂತ್ರೆ ಸದಾನಂದ್ ಮಲ್ಲಪ್ಪ<br>ಎಸ್.ಡಿ.ವಿ. ಎಸ್. ಸಂಘ, ಶ್ರೀ ಎಲ್.ಕೆ. ಕೋತ್ ಪದವಿ ಪೂರ್ವ ವಾಣಿಜ್ಯ ಕಾಲೇಜು, ಸಂಕೇಶ್ವರ್, ಹುಕ್ಕೇರಿ ತಾ.ಬೆಳಗಾಂ (ಜಿಲ್ಲೆ) ಮೊಬೈಲ್ ಸಂ. 09561914161 | ಆಂಗ್ಲಭಾಷಾ ಉಪನ್ಯಾಸಕರು | ವಿದ್ಯಾರಣ್ಯ ಪದವಿ ಪೂರ್ವ ಕಾಲೇಜು, ಮಡಿಹಾಳ ರೋಡ್, ದಾರವಾಡ, 580001 |
| 36 | ವಂದನ ಬಿ ಕಮ್ಮಾರ್<br>ಎಸ್.ಕೆ. ಸಂಯುಕ್ತ. ಪದವಿ ಪೂರ್ವ ಕಾಲೇಜು, ಹುಕ್ಕೇರಿ, ಬೆಳಗಾಂ (ಜಿಲ್ಲೆ),ಮೊಬೈಲ್ ಸಂ. 9611204653 | ಆಂಗ್ಲಭಾಷಾ ಉಪನ್ಯಾಸಕರು | ಎಸ್.ಕೆ. ಸಂಯುಕ್ತ. ಪದವಿ ಪೂರ್ವ ಕಾಲೇಜು, ಹುಕ್ಕೇರಿ ,ಬೆಳಗಾಂ (ಜಿಲ್ಲೆ) 591309 |
| 37 | ಜಯಶ್ರೀ ವೀರಪ್ಪ ಕರಣಿ,<br>ಕಿ.ನಾ.ವಿ.ವ. ಸಂಘದ ಪದವಿ ಪೂರ್ವ ಮಹಾವಿದ್ಯಾಲಯ, ಕಿತ್ತೂರು, ಬೈಲಹೊಂಗಲ ತಾ. ಬೆಳಗಾವಿ (ಜಿಲ್ಲೆ),ಮೊಬೈಲ್ ಸಂ. 9972842915 | ಆಂಗ್ಲಭಾಷಾ ಉಪನ್ಯಾಸಕರು | ಹರಭಟ್ ಸಂಯುಕ್ತ. ಪದವಿ ಪೂರ್ವ ಕಾಲೇಜು, ಕುಂದಗೋಳ, ಧಾರವಾಡ 581115 |

..7

| | | | |
|---|---|---|---|
| 38 | ಮಾನಪ್ಪ ಬಡಿಗೇರ್, ಶ್ರೀ ವಿಜಯ ಮಹಾಂತೇಶ ಪದವಿ ಪೂರ್ವ ಕಾಲೇಜು, ಇಳಕಲ್-587125, ಬಾಗಲಕೋಟೆ (ಜಿಲ್ಲೆ), ಮೊಬೈಲ್ ಸಂ. 9743395060 | ಆಂಗ್ಲಭಾಷಾ ಉಪನ್ಯಾಸಕರು | ಬಿ.ಎ. ಜೆ.ಎಸ್.ಎಸ್ ಸ್ವತಂತ್ರ ಪದವಿ ಪೂರ್ವ ಕಾಲೇಜು, ರಾಣಿಬೆನ್ನೂರು, ರಾಜೇಶ್ವರಿನಗರ, ಹಾವೇರಿ 581115 |
| 39 | ಉಸ್ಮಾನ್, ನ್ಯೂ ಕನ್ನಡ ಸಂಯುಕ್ತ ಪದವಿ ಪೂರ್ವ ಕಾಲೇಜು, ಯಾದಗಿರಿ, ಮೊಬೈಲ್ ಸಂ. 8861869953 | ಆಂಗ್ಲಭಾಷಾ ಉಪನ್ಯಾಸಕರು | ಎಸ್.ವಿ.ಇ.ಟಿ.ಎಸ್ ಮಹಿಳಾ ಸ್ವತಂತ್ರ ಪದವಿ ಪೂರ್ವ ಕಾಲೇಜು, ಹುಮ್ನಾಬಾದ್, ಬೀದರ್ 585330 |
| 40 | ಎಂ ಕೆ ನಂಜೇಗೌಡ, ಶಾಂತಿ ಪದವಿ ಪೂರ್ವ ಕಾಲೇಜು, ಮಳವಳ್ಳಿ, ಮಂಡ್ಯ (ಜಿಲ್ಲೆ),ಮೊಬೈಲ್ ಸಂ. 9900889767 | ಆಂಗ್ಲಭಾಷಾ ಉಪನ್ಯಾಸಕರು | ಮುರ್ನಾಡ್ ಪದವಿ ಪೂರ್ವ ಕಾಲೇಜು, ಮುರ್ನಾಡ್ ಮಡಿಕೇರಿ, ಕೊಡಗು ಜಿಲ್ಲೆ 571252 |
| 41 | ಲೀನಾ ಎಸ್. ನರೋನ್ಹ, ಪ್ರೊಗ್ರೆಸಿವ್ ಸಂಯುಕ್ತ ಪದವಿ ಪೂರ್ವ ಕಾಲೇಜು, ಗಾಂಧಿನಗರ, ಶಿರಸಿ, ಉತ್ತರಕನ್ನಡ. ಮೊಬೈಲ್ ಸಂ. 8861941699 | ಆಂಗ್ಲ ಭಾಷಾ ಉಪನ್ಯಾಸಕರು | ನ್ಯಾಷನಲ್ ಕಾಂಪೋಸಿಟ್ ಪದವಿ ಪೂರ್ವ ಕಾಲೇಜು, ಬಿ.ಆರ್ ಪ್ರಾಜೆಕ್ಟ್ ಭದ್ರಾವತಿ ತಾ, ಶಿವಮೊಗ್ಗ-577115. |
| 42 | ದೇವಿಕಾ ಎಂ, ಜೆ.ಎಸ್.ಎಸ್. ಮಹಿಳಾ ಪದವಿ ಪೂರ್ವ ಕಾಲೇಜು, ಚಾಮರಾಜನಗರ-571313, ಮೊಬೈಲ್ ಸಂ. 8884432013 | ಆಂಗ್ಲಭಾಷಾ ಉಪನ್ಯಾಸಕರು | ಎಸ್ ವಿ ಟಿ ಬಾಲಕಿಯರ ಪದವಿ ಪೂರ್ವ ಕಾಲೇಜು, ಕಾರ್ಕಳ, ಉಡುಪಿ-574104 |
| 43 | ನಾಗರಾಜ್ ಹೊಳೆಯಣ್ಣನವರ, ವಿದ್ಯಾರಣ್ಯ ಪದವಿ ಪೂರ್ವ ಕಾಲೇಜು, ಧಾರವಾಢ, ಮೊಬೈಲ್ ಸಂ. 9035256119 | ಆಂಗ್ಲಭಾಷಾ ಉಪನ್ಯಾಸಕರು | ಸಿದ್ದಾರ್ಥ ಪದವಿ ಪೂರ್ವ ಕಾಲೇಜು, ಪಸ್ಟ್ ಮೈನ್, ಜೆ.ಸಿ.ರಸ್ತೆ, ವಿನಾಯಕನಗರ, ತುಮಕೂರು-572102 |
| 44 | ಶಿವಕುಮಾರ್ ಬಿ ಶಾಂತಿ ಪದವಿ ಪೂರ್ವ ಕಾಲೇಜು, ಮಳವಳ್ಳಿ-571430, ಮಂಡ್ಯ(ಜಿಲ್ಲೆ) ಮೊಬೈಲ್ ಸಂ. 9449301385 | ಜೀವಶಾಸ್ತ್ರ ಉಪನ್ಯಾಸಕರು | ಎಸ್ ಟಿ ರೂರಲ್ ಸಂಯುಕ್ತ ಪದವಿ ಪೂರ್ವ ಕಾಲೇಜು, ನಾಯಕನಹಟ್ಟಿ, ಚಳ್ಳಕೆರೆ, ಚಿತ್ರದುರ್ಗ-577536. |
| 45 | ಪರಮೇಶ್ವರಯ್ಯ ಹೆಚ್ ಆರ್ ಶಾಂತಿ ಪದವಿ ಪೂರ್ವ ಕಾಲೇಜು, ಮಳವಳ್ಳಿ -571430, ಮಂಡ್ಯ(ಜಿಲ್ಲೆ) ,ಮೊಬೈಲ್ ಸಂ. 9448424443 | ಜೀವಶಾಸ್ತ್ರ ಉಪನ್ಯಾಸಕರು | ಜಗದ್ಗುರು ಕೋಡಿಮಠ್ ಪದವಿ ಪೂರ್ವ ಕಾಲೇಜು, ಅರಸೀಕೆರೆ, ಹಾಸನ-573103. |
| 46 | ಶಿವಪ್ಪ.ಎಂ.ಸಿ ಗ್ರಾಮಾಂತರ ಸಂಯುಕ್ತ ಪದವಿ ಪೂರ್ವ ಕಾಲೇಜು, ಕೆರಗೋಡು, ಮಂಡ್ಯ ತಾ. (ಜಿಲ್ಲೆ) -571446 ,ಮಂಡ್ಯ ತಾ. (ಜಿಲ್ಲೆ) | ಜೀವಶಾಸ್ತ್ರ ಉಪನ್ಯಾಸಕರು | ಎಸ್ ಬಿ ಆರ್ ಆರ್ ಮಹಾಜನ್ ಪದವಿ ಪೂರ್ವ ಕಾಲೇಜು, ಜಯಲಕ್ಷ್ಮಿಪುರಂ, ಮೈಸೂರು-5770012. |
| 47 | ಶಂಕರಗೌಡ ಪಾಟೀಲ ಸರ್ವೋದಯ ಶಿಕ್ಷಣ ಸಮಿತಿ ಪದವಿ ಪೂರ್ವ, ಮಹಾವಿದ್ಯಾಲಯ, ಶಿರೋಳ, ನರಗುಂದ ತಾ. ಗದಗ (ಜಿಲ್ಲೆ) ಮೊಬೈಲ್ ಸಂ. 9964146510 | ಜೀವಶಾಸ್ತ್ರ ಉಪನ್ಯಾಸಕರು | ಆರ್ ಎಂ ಜಿ ಪದವಿ ಪೂರ್ವ ಕಾಲೇಜು, ಮುಧೋಳ, ಬಾಗಲಕೋಟೆ-587913. |
| 48 | ಅರವಿಂದ್ ಪೊತದಾರ್ ವಾಣಿಜ್ಯ ಬಿ.ಹೆಚ್.ಎಸ್. ಕಲೆ ಮತ್ತು ಟಿ.ಜಿ.ಪಿ. ವಿಜ್ಞಾನ ,ಪದವಿ ಪೂರ್ವ ಮಹಾವಿದ್ಯಾಲಯ, ಜಮಖಂಡಿ-587302,ಬಾಗಲಕೋಟೆ (ಜಿಲ್ಲೆ) ಮೊಬೈಲ್ ಸಂ. 9945700493 | ಜೀವಶಾಸ್ತ್ರ ಉಪನ್ಯಾಸಕರು | ವಿವೇಕಾನಂದ ಪದವಿ ಪೂರ್ವ ಕಾಲೇಜು, ಕೆ.ಆರ್. ಬಡಾವಣೆ, ತುಮಕೂರು-572102. |

| | | | |
|---|---|---|---|
| 49 | ನಾಗಮಾದಯ್ಯ ಪಿ<br>ಭಾರತಿ ಪದವಿ ಪೂರ್ವ ಕಾಲೇಜು,<br>ಭಾರತೀನಗರ, ಮದ್ದೂರು ತಾ. ಮಂಡ್ಯ(ಜಿಲ್ಲೆ)<br>ಮೊಬೈಲ್ ಸಂ.9620038755 | ಜೀವಶಾಸ್ತ್ರ ಉಪನ್ಯಾಸಕರು | ಭಾರತಿ ಪದವಿ ಪೂರ್ವ ಕಾಲೇಜು,<br>ಭಾರತೀನಗರ, ಮದ್ದೂರು ತಾ. ಮಂಡ್ಯ(ಜಿಲ್ಲೆ) |
| 50 | ಗಿರೀಶ್ ಎಸ್ ಎಸ್<br>ಭಾರತಿ ಪದವಿ ಪೂರ್ವ<br>ಕಾಲೇಜು,ಕಿರುಗಾವಲು, ಮಳವಳ್ಳಿ<br>ತಾ.ಮಂಡ್ಯ(ಜಿಲ್ಲೆ) ಮೊಬೈಲ್ ಸಂ.<br>8904129002 | ಜೀವಶಾಸ್ತ್ರ ಉಪನ್ಯಾಸಕರು | ಡಿ ವಿ ಎಸ್ ಸ್ವತಂತ್ರ ಪದವಿ ಪೂರ್ವ ಕಾಲೇಜು,<br>ಪಿ.ಬಿ. ನಂ. 98, ಜ್ಞಾನದೀಪಿಕ, ಶಿವಮೊಗ್ಗ-<br>577201. |
| 51 | ಮೋಹನೇಶ್ ಬ್ಯಡಿಗೇರ್<br>ಶ್ರೀ ಹುಚ್ಚೇಶ್ವರ ಸಂಯುಕ್ತ ಪದವಿ ಪೂರ್ವ<br>ಮಹಾವಿದ್ಯಾಲಯ, ಕಮತಗಿ, ಹುನಗುಂದ ತಾ.<br>ಬಾಗಲಕೋಟೆ (ಜಿಲ್ಲೆ) ಮೊಬೈಲ್ ಸಂ.<br>9902449178 | ಜೀವಶಾಸ್ತ್ರ ಉಪನ್ಯಾಸಕರು | ಅಮರೇಶ್ವರ ಪದವಿ ಪೂರ್ವ ಕಾಲೇಜು,<br>ಔರಾದ್, ಬೀದರ್-585326. |
| 52 | ಜಾನ್ಸನ್ ಬಾಬು ಆರ್,<br>ಶ್ರೀ ಬಸವಲಿಂಗಪ್ಪ ಪದವಿ ಪೂರ್ವ ಕಾಲೇಜು,<br>ಕೊಳ್ಳೇಗಾಲ, ಚಾಮರಾಜನಗರ (ಜಿಲ್ಲೆ),<br>ಮೊಬೈಲ್ ಸಂ. 8105916446 | ಜೀವಶಾಸ್ತ್ರ ಉಪನ್ಯಾಸಕರು | ಯು ಇ ಎಸ್ ಪದವಿ ಪೂರ್ವ ಕಾಲೇಜು, ಪಿ<br>& ಟಿ ಕಾಲೋನಿ, ಸಾಲಗಾಮೆ ರಸ್ತೆ, ಹಾಸನ-<br>573201. |

**ಷರತ್ತುಗಳು**

1. ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ವಿಲೀನಗೊಳಿಸುವ ವಿಧೇಯಕ 2011 ರನ್ವಯ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಯನ್ನು ಯಾವುದೇ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ವಿಲೀನಗೊಳಿಸಲಾಗಿದೆ ಎಂಬ ಷರತ್ತು ವಿಧಿಸಲಾಗಿದೆ.
2. ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ 1978ರ (1990ರ ಕರ್ನಾಟಕ ಅಧಿನಿಯಮ 14) ಅಡಿಯಲ್ಲಿ ರಚಿಸಿದ ಅಥವಾ ರಚಿಸಲಾಗಿದೆ ಎಂದು ಭಾವಿಸಲಾದ ಸೇವಾ ಷರತ್ತುಗಳನ್ನು ನಿಯಂತ್ರಿಸುವ ಯಾವುದೇ ಇತರ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ವಿಲೀನಗೊಂಡ ಅರೆಕಾಲಿಕ, ವೃತ್ತಿ ಆಧಾರಿತ ಕೋರ್ಸುಗಳ ನೌಕರನು ಕರ್ತವ್ಯಕ್ಕೆ ಹಾಜರಾದ ನಂತರ ಈ ಅಧಿನಿಯಮದ ಅಡಿಯಲ್ಲಿ ಆತನ ಪ್ರಾರಂಭಿಕ ಮೂಲ ವೇತನವನ್ನು ಆತನು/ಆತಳು ವಿಲೀನಗೊಂಡ ಹುದ್ದೆಯ ಪ್ರವರ್ಗದ ಕಾಲಿಕ ವೇತನ ಶ್ರೇಣಿಯ ಕನಿಷ್ಠಕ್ಕೆ ನಿಗದಿಗೊಳಿಸತಕ್ಕದ್ದು ಹಾಗೂ ತನ್ನ ವಿಲೀನಕ್ಕೆ ಮೊದಲು ಸಲ್ಲಿಸಿದ ಸೇವೆಯನ್ನು ವೇತನ, ಜೇಷ್ಠತೆ ಹಾಗೂ ರಜೆ ಅಥವಾ ಪಿಂಚಣಿಗೆ ಸಂಬಂಧಿಸಿದಂತೆ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.
3. ಸರ್ಕಾರದ ಅಧಿಸೂಚನೆ ದಿನಾಂಕ 06-04-2011 ರಲ್ಲಿನ ಎಲ್ಲಾ ನಿಯಮಗಳನ್ನು ಪಾಲಿಸಿರತಕ್ಕದ್ದು.

...9

4. ವಿಲೀನಗೊಂಡ ಉಪನ್ಯಾಸಕರು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು ದಿನಾಂಕ 27-05-1998 ಮತ್ತು 04-02-2008 ಹಾಗೂ 15-05-2014 ರಲ್ಲಿ ಉಪನ್ಯಾಸಕ ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆಗಳನ್ನು ಹೊಂದಿರತಕ್ಕದ್ದು. ಹಾಗೂ ಅರ್ಹ ಅಭ್ಯರ್ಥಿಗಳ ಪಟ್ಟಿ ವೃತ್ತಿ ಶಿಕ್ಷಣ ಇಲಾಖೆ ತಯಾರಿಸಿದ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗಿರಬೇಕು, ಸದರಿ ಪಟ್ಟಿಯನ್ನು ಸರ್ಕಾರ ಅನುಮೋದಿಸಿರಬೇಕು.

5. ವಿಲೀನಗೊಳ್ಳುತ್ತಿರುವ ಸಿಬ್ಬಂದಿಯ ಸೇವಾ ವಿವರ, ಜೇಷ್ಠತೆ, ಜಾತಿ ಮತ್ತು ವಿದ್ಯಾರ್ಹತೆ ಮುಂತಾದವುಗಳಿಗೆ ಸಂಬಂಧಪಟ್ಟ ವಿವರಗಳನ್ನು ದಾಖಲೆಗಳ ಪರಿಶೀಲನೆಯಿಂದ ವಿಲೀನ ಸಮಿತಿಯು ದೃಢೀಕರಿಸಿ, ಅರ್ಹತೆಯನ್ನು ನಿಗದಿಪಡಿಸಿದೆ. ವಿಲೀನಗೊಳ್ಳುತ್ತಿರುವ ಸಿಬ್ಬಂದಿ ಕರ್ನಾಟಕ ಸಿವಿಲ್ ಸೇವಾ ನಿಯಮಗಳು, ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು 1966 ಮತ್ತು ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ 1978ರ (1990 ಕರ್ನಾಟಕ ಅಧಿನಿಯಮ 14) ಅಡಿಯಲ್ಲಿ ರಚಿಸಿದ ಅಥವಾ ರಚಿಸಲಾಗಿದೆಯೆಂದು ಭಾವಿಸಿದ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಅನ್ವಯವಾಗುವಂತಹ ನಿಯಮಗಳಿಗೆ ಒಳಪಟ್ಟಿರುತ್ತಾರೆ.

6. ಕರ್ನಾಟಕ ಸಿವಿಲ್ ಸೇವಾ ನಿಯಮಗಳು, ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು 1966 ಮತ್ತು ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ 1978ರ (1990 ಕರ್ನಾಟಕ ಅಧಿನಿಯಮ 14) ಅಡಿಯಲ್ಲಿ ರಚಿಸಿದ ಅಥವಾ ರಚಿಸಲಾಗಿದೆಯೆಂದು ಭಾವಿಸಿದ ಖಾಸಗಿ ಅನುದಾನಿತ ನೌಕರರ ಸೇವಾ ಷರತ್ತುಗಳನ್ನು ವಿನಿಯಮಿಸುವ(Regulating) ಎಲ್ಲಾ ಇತರ ನಿಯಮಗಳು, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗುವಷ್ಟರ ಮಟ್ಟಿಗೆ ಈ ಅಧಿನಿಯಮದ ಅಡಿಯಲ್ಲಿ ವಿಲೀನಗೊಂಡ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರಿಗೆ ಅನ್ವಯವಾಗತಕ್ಕದ್ದು.

7. ಸೇವಾ ಸಕ್ರಮಗೊಳಿಸಲಾದ ಹುದ್ದೆಯು ಮಂಜೂರಾದ ಹಾಗೂ ಅನುದಾನಿತ ಹುದ್ದೆಯಾಗಿರತಕ್ಕದ್ದು. ಹಾಗೂ ಸದರಿ ಹುದ್ದೆಯು ವಿಚ್ಛಿನ್ನತೆಯಿಲ್ಲದೆ ಪಾಠ ಪ್ರವಚನ ನಡೆದಿರಬೇಕು.

8. ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ನಿಯಮಗಳು 2006ರ ನಿಯಮ 14 ರಂತೆ ಹುದ್ದೆಗೆ ಅಗತ್ಯ ಕಾರ್ಯಭಾರ ಇರತಕ್ಕದ್ದು.

9. ಸಕ್ರಮಗೊಳಿಸಿ ನಿಯುಕ್ತಿಗೊಳಿಸಿದ ಹುದ್ದೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗೆ ಮೀಸಲಿರಿಸಿರಬಾರದು.

10. ಸರ್ಕಾರದ ಆದೇಶದ ದಿನಾಂಕದಿಂದ ಉಪನ್ಯಾಸಕ ಹುದ್ದೆಯ ಕನಿಷ್ಠ ವೇತನ ಶ್ರೇಣಿಯ ಕನಿಷ್ಠ ವೇತನ ಅರ್ಹವಿರುವ ಮತ್ತು ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

..10

11. ಜೆ.ಓ.ಸಿ ವಿಲೀನ ವಿಧೇಯಕದನ್ವಯ ಮೇಲ್ಕಂಡ ಸಿಬ್ಬಂದಿಯನ್ನು ಒಂದು ಬಾರಿಯ ಕ್ರಮವಾಗಿ ಖಾಲಿ ಹುದ್ದೆಗಳಿಗೆ ವಿಲೀನಗೊಳಿಸಲು ಆರ್ಥಿಕ ಮಿತವ್ಯಯ ಆದೇಶವನ್ನು ಹಿಂಪಡೆದು ನೇರ ನೇಮಕಾತಿಯ ಹುದ್ದೆಗಳಿಗೆ ಅನುಷ್ಠಾನಗೊಳಿಸಿದ ಪ್ರಕ್ರಿಯೆಯಾಗಿರುತ್ತದೆ. ಆದಕಾರಣ ಸ್ಥಳ ನಿಯುಕ್ತಿಗೊಂಡ ಸಿಬ್ಬಂದಿಯನ್ನು ಖಾಸಗಿ ಆಡಳಿತ ಮಂಡಳಿಯವರು ಯಾವ ಆಡಚಣೆಯೂ ಇಲ್ಲದೆ ಸುಸೂತ್ರವಾಗಿ ನೇಮಕಾತಿ ಮಾಡಿಕೊಳ್ಳಲು ಸೂಚಿಸಲಾಗಿದೆ **ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳಲು ನಿರಾಕರಿಸಿದಲ್ಲಿ ಕಾಲೇಜಿನ ವೇತನಾನುದಾನವನ್ನು ತಡೆಹಿಡಿಯಲಾಗುವುದು**. ಹಾಗೂ ಈ ಹುದ್ದೆಯನ್ನು ಶಾಶ್ವತ ಅನುದಾನ ರಹಿತ ಹುದ್ದೆ ಮತ್ತು ಸ್ಥಗಿತ ಹುದ್ದೆ ಎಂದು ಘೋಷಿಸುವ ಬಗ್ಗೆ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

12. ಈ ಉಪನ್ಯಾಸಕರನ್ನು ನೇಮಿಸಲಾದ ಸಂಸ್ಥೆಗಳು ಇವರನ್ನು ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳಲು ನಿರಾಕರಿಸಿದಲ್ಲಿ ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರು, ಇವರು ಸೂಕ್ತ ಕ್ರಮವಹಿಸಿ ಸದರಿ ಉಪನ್ಯಾಸಕರನ್ನು ಆಯಾ ಹುದ್ದೆಗಳಲ್ಲಿ ಕರ್ತವ್ಯಕ್ಕೆ ಹಾಜರಾಗಲು ಕ್ರಮವಹಿಸತಕ್ಕದ್ದು.

13. ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಕೋರಿ ಸರ್ಕಾರ/ಇಲಾಖೆಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದಲ್ಲ.

14. ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಆಯಾ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ ಇರುವುದನ್ನು ಸಂಬಂಧಿಸಿದ ಪ್ರಾಚಾರ್ಯರು ಖಚಿತಪಡಿಸಿಕೊಳ್ಳಬೇಕು.

15. ಕರ್ನಾಟಕ ಅರೆಕಾಲಿಕ ವೃತ್ತಿ ಕೋರ್ಸುಗಳ ನೌಕರರನ್ನು ವಿಲೀನಗೊಳಿಸುವ ಅಧಿನಿಯಮ 2011ರ ಪ್ರಕಾರ ಅರ್ಹರಾಗಿರುವರು ಎಂಬುದನ್ನು ದೃಢಪಡಿಸಿಕೊಳ್ಳಬೇಕು ಮತ್ತು ಆ ನಿಯಮಗಳಲ್ಲಿನ ಎಲ್ಲಾ ಷರತ್ತುಗಳು ಪೂರೈಕೆಯಾಗಿರಬೇಕು.

16. ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ನಿಯಮಗಳು 2006ರ ನಿಯಮ 21(2) ಮತ್ತು 21(3)ರ ಅನ್ವಯ ಸದರಿ ಉಪನ್ಯಾಸಕರು ಈ ಹಿಂದೆ ಸಲ್ಲಿಸಿದ ಸೇವೆಯನ್ನು ಯಾವುದೇ ಸೇವಾ ಸೌಲಭ್ಯಗಳಿಗೆ ಪರಿಗಣಿಸಲಾಗುವುದಿಲ್ಲ ಎಂಬ ಷರತ್ತಿಗೆ ಬದ್ಧನಾಗಿರತಕ್ಕದ್ದು. ಈ ಸಂಬಂಧದಲ್ಲಿ ₹100/-ರ ಛಾಪ ಕಾಗದದಲ್ಲಿ ಮುಚ್ಚಳಿಕೆ ಬರೆಸಿಕೊಂಡ ನಂತರವೇ ವೇತನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

17. ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಅನ್ವಯ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ನಿಯಮಗಳು 2006 (ಶೈಕ್ಷಣಿಕ ನೋಂದಣಿ ಆಡಳಿತ ಮತ್ತು ಸಹಾಯಾನುದಾನ ಇತರೆ) ರನ್ವಯ ವಿದ್ಯಾರ್ಥಿಗಳ ದಾಖಲಾತಿ/ಹಾಜರಾತಿ ನಿಯಮಾನುಸಾರ ಇರತಕ್ಕದ್ದು ಹುದ್ದೆಗೆ ನಿಗದಿತ ಕಾರ್ಯಭಾರ ಮತ್ತು ಫಲಿತಾಂಶ ಉತ್ತಮವಾಗಿರತಕ್ಕದ್ದು. ಹಾಗೂ ಇತರೆ ಎಲ್ಲಾ ಷರತ್ತುಗಳನ್ನು ಸಂಸ್ಥೆ ಪೂರೈಸಿದ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

18. ನಿಯುಕ್ತಿಗೊಳಿಸಿದ ಹುದ್ದೆಯು ದಿನಾಂಕ 01-06-1987ರ ಪೂರ್ವದಲ್ಲಿ ಮಂಜೂರಾಗಿ ಅನುದಾನಕ್ಕೆ ಒಳಪಟ್ಟಿರಬೇಕು.
19. ಸಕ್ರಮಗೊಂಡ ಉಪನ್ಯಾಸಕರು ಯಾವುದೇ ಸರ್ಕಾರಿ ಸೇವೆಯಲ್ಲಾಗಲಿ/ಪೂರ್ಣಕಾಲಿಕ ಖಾಯಂ ಹುದ್ದೆಯಲ್ಲಿ/ ಯಾವುದೇ ವೃತ್ತಿಯಲ್ಲಿ ಇರಬಾರದು ಈ ಬಗ್ಗೆ ₹ 100/- ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪಡೆಯಬೇಕು.
20. ಸೇವಾ ಸಕ್ರಮಗೊಳಿಸುವ ಸಂಬಂಧ, ಈವರೆವಿಗೂ ಜಿಲ್ಲಾ ಉಪ ನಿರ್ದೇಶಕರು, ಪ್ರಾಚಾರ್ಯರು ಹಾಗೂ ಸಂಬಂಧಿಸಿದ ಉಪನ್ಯಾಸಕರು, ವೃತ್ತಿ ಶಿಕ್ಷಣ ಇಲಾಖೆಗೆ ಸಲ್ಲಿಸಿದ ಯಾವುದೇ ಮಾಹಿತಿ ಭವಿಷ್ಯದಲ್ಲಿ ತಪ್ಪೆಂದು ತಿಳಿದು ಬಂದಲ್ಲಿ ನಿಯಮಾನುಸಾರ ಪರಿಶೀಲಿಸಿ ಸಕ್ರಮಗೊಳಿಸಿದ ಆದೇಶವನ್ನು ರದ್ದುಪಡಿಸಲು ಕ್ರಮ ಜರುಗಿಸಲಾಗುವುದು.
21. ಉಪನ್ಯಾಸಕರು, ದಿನಾಂಕ 16-02-2015ರ ಒಳಗಾಗಿ ನಿಯುಕ್ತಿಗೊಳಿಸಿದ ಸ್ಥಳಕ್ಕೆ ಕರ್ತವ್ಯದ ಮೇಲೆ ಹಾಜರಾಗತಕ್ಕದ್ದು. ನಿಗದಿತ ಅವಧಿಯಲ್ಲಿ ಕರ್ತವ್ಯದ ಮೇಲೆ ಹಾಜರಾಗದೇ ಇದ್ದಲ್ಲಿ ಆದೇಶ ತಂತಾನೆ ರದ್ದಾಗುತ್ತದೆ.
22. ಸಂಬಂಧಪಟ್ಟ ಪ್ರಾಚಾರ್ಯರು, ಉಪನ್ಯಾಸಕರು ಕರ್ತವ್ಯಕ್ಕೆ ಹಾಜರಾದ ಮಾಹಿತಿಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಹಾಗೂ ವೃತ್ತಿ ಶಿಕ್ಷಣ ಇಲಾಖೆಗೆ ಸಲ್ಲಿಸುವುದು ತಿಳಿಸಿದೆ.
23. ಶ್ರೀಯುತರ ಜನ್ಮ ದಿನಾಂಕವನ್ನು ದೃಢೀಕರಿಸುವ ಎಸ್.ಎಸ್.ಎಲ್.ಸಿ ಪ್ರಮಾಣಪತ್ರ ಮತ್ತು ವಿದ್ಯಾರ್ಹತೆಗಳ ಬಗ್ಗೆ ನೈಜತೆ ಹಾಗೂ ಸಿಂಧುತ್ವವನ್ನು ಸಂಬಂಧಿಸಿದ ಪ್ರಾಧಿಕಾರದಿಂದ ನೈಜತೆ ಪ್ರಮಾಣ ಪತ್ರವನ್ನು ಪಡೆದ ನಂತರ ಸೂಕ್ತ ದಾಖಲೆಗಳೊಂದಿಗೆ ಪ್ರಥಮ ವೇತನ ಬಿಡುಗಡೆ ಮಾಡಲು ಸಂಬಂಧಿಸಿದ ಪ್ರಾಚಾರ್ಯರು, ಜಿಲ್ಲಾ ಉಪ ನಿರ್ದೇಶಕರವರ ಮೂಲಕ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಪ್ರಸ್ತಾವನೆ ಸಲ್ಲಿಸುವುದು.
24. ಸೇವಾ ಸಕ್ರಮಗೊಂಡ ಪದವಿ ಪೂರ್ವ ಕಾಲೇಜಿನ ಮಾನ್ಯತೆಯನ್ನು ಕಾಲಕಾಲಕ್ಕೆ ನವೀಕರಿಸಿಕೊಂಡಿರಬೇಕು.
25. ಸೇವಾ ಸಕ್ರಮಗೊಂಡ ಉಪನ್ಯಾಸಕರು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಎರಡು ವರ್ಷಗಳ ಖಾಯಂ ಪೂರ್ವ ಸೇವಾ ಅವಧಿಯಲ್ಲಿರುತ್ತಾರೆ. ಸಂಬಂಧಿಸಿದ ಆಡಳಿತ ಮಂಡಳಿ ಈ ಬಗ್ಗೆ ಪರಿಶೀಲಿಸಿ ಖಾಯಂ ಪೂರ್ವ ಸೇವಾ ಅವಧಿಯನ್ನು ಘೋಷಿಸುವ ಬಗ್ಗೆ ಕ್ರಮ ಜರುಗಿಸುವುದು.

..12

ಮೇಲ್ಕಂಡ ಷರತ್ತುಗಳನ್ನು ಜಿಲ್ಲಾ ಉಪ ನಿರ್ದೇಶಕರು/ ಸಂಬಂಧಿಸಿದ ಪ್ರಾಚಾರ್ಯರು ಕಡ್ಡಾಯವಾಗಿ ಪರಿಶೀಲಿಸತಕ್ಕದ್ದು, ಷರತ್ತುಗಳ ಬಗ್ಗೆ ಸಂದೇಹ ಅಥವಾ ಪಾಲನೆಯಾಗದಿದ್ದಲ್ಲಿ ಈ ಕಛೇರಿಯಿಂದ ಸ್ಪಷ್ಟೀಕರಣ ಪಡೆದ ನಂತರವೇ ಪ್ರಥಮ ವೇತನ ಬಿಡುಗಡೆಗೆ ಇಲಾಖಾ ಅನುಮತಿ ಪಡೆದು ವೇತನ ಬಿಡುಗಡೆ ಮಾಡತಕ್ಕದ್ದು. ಷರತ್ತುಗಳನ್ನು ಪರಿಶೀಲಿಸದೆ ವೇತನ ಬಿಡುಗಡೆ ಮಾಡಿದಲ್ಲಿ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು ನೇರ ಹೊಣೆಗಾರರಾಗಿರುತ್ತಾರೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳುಃ

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಬಹುಮಹಡಿ ಕಟ್ಟಡ, 6ನೇ ಮಹಡಿ 3ನೇ ಗೇಟ್ ಬೆಂಗಳೂರು-560001.
3. ನಿರ್ದೇಶಕರು, ವೃತ್ತಿ ಶಿಕ್ಷಣ ಇಲಾಖೆ, ಪಮೂಶಿ ಭವನ, 3ನೇ ಮಹಡಿ ಮಲ್ಲೇಶ್ವರ, ಬೆಂ-12
4. ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ.
5. ಸಹಾಯಕ ನಿರ್ದೇಶಕರು, ಇ-ಆಡಳಿತ ಇವರಿಗೆ, ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು.
6. ಸಂಬಂಧಿಸಿದ ಆಡಳಿತ ಮಂಡಳಿಯ ಅಧ್ಯಕ್ಷರು/ಕಾರ್ಯದರ್ಶಿಗಳು, ಇವರಿಗೆ ಪ್ರಾಚಾರ್ಯರ ಮುಖಾಂತರ.
7. ಸಂಬಂಧಿಸಿದ ಪ್ರಾಚಾರ್ಯರುಗಳಿಗೆ, ಮುಂದಿನ ಸೂಕ್ತ ಕ್ರಮ ಕೈಗೊಳ್ಳಲು.
8. ಸಂಪಂಧಪಟ್ಟ ಉಪನ್ಯಾಸಕರುಗಳಿಗೆ,
9. ಪದವಿ ಪೂರ್ವ ಶಿಕ್ಷಣ ಇಲಾಖೆ, ಸಿಬ್ಬಂದಿ-3ರ ಸಂಬಂಧಪಟ್ಟ ಶಾಖಾಧಿಕಾರಿಗಳು/ಪತ್ರಾಂಕಿತ ವ್ಯವಸ್ಥಾಪಕರು/ಅಧೀಕ್ಷಕರು/ವಿಷಯನಿರ್ವಾಹಕರುಗಳಿಗೆ ಮಾಹಿತಿಗಾಗಿ.
10. ಕಛೇರಿ ಪ್ರತಿ.

<u>ಪ್ರತಿಯನ್ನು ಮಾಹಿತಿಗಾಗಿ,</u>

1. ಆಪ್ತ ಕಾರ್ಯದರ್ಶಿಗಳು, ಮಾನ್ಯ ಶಿಕ್ಷಣ ಸಚಿವರು(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ), ವಿಧಾನ ಸೌಧ, ಬೆಂಗಳೂರು-01, ಮಾನ್ಯ ಸಚಿವರ ಕೃಪಾವಗಾಹನೆಗೆ ತರಲು ಕೋರಲಾಗಿದೆ.